> ಬಳಪ ಬೇಕೆಂದು ಕೇಳಿದಾಗೆಲ್ಲ ಅಪ್ಪ ಒಂದು ಇಡಿಯ ಬಳಪವನ್ನು ತೆಗೆದು ಅದನ್ನು ಕಟ್ ಕಟ್ ಎಂದು ಮುರಿದು ಮೂರು ತುಂಡು ಮಾಡಿ ಒಂದನ್ನು ನನ್ನ ಕೈಗಿಡುತ್ತಿದ್ದ. ಆ ಕಟ್ ಕಟ್... ಎನ್ನುವ ಸದ್ದಿನೊಂದಿಗೆ ನನ್ನ ಕನಸು ಕೂಡ ಮುರಿದುಹೋಗುತ್ತಿತ್ತು.

ಘಟಿಸಿಲ್ಲವೆಂದಲ್ಲ. ಆದರೆ ನೈಜತೆಯ ನೆಲೆಯಲ್ಲಿ ಅಲ್ಲ." ಹೌದು, ನಾನಾಗ ಅಕ್ಕನೊಂದಿಗೆ ಪೇಟೆಯಲ್ಲಿದ್ದು ಕಾಲೇಜಿಗೆ ಹೋಗುತ್ತಿದ್ದೆ. ಹಳ್ಳಿಯಲ್ಲಿರುವ ಮನೆಗೆ ಹೋಗಲು ಮನಸ್ಸು ತಹತಹಿಸುತ್ತಿತ್ತು. ಆದರೆ ಪರೀಕ್ಷೆಗಿನ್ನೂ ಕೆಲವೇ ದಿನಗಳಿರುವುದರಿಂದ ಹಳ್ಳಿಗೆ ಹೋಗಿ ಓದದೇ ಊರಿಡಿ ತಿರುಗುವ ನನ್ನ ಸ್ವಭಾವದ ಅರಿವಿದ್ದ ಅಕ್ಕ ನನ್ನನ್ನು ಹೋಗಗೊಡುತ್ತಿರಲಿಲ್ಲ. ಅಂಥದೊಂದು ಭಾನುವಾರ ರೂಮಿನಲ್ಲಿ ಕುಳಿತು ಓದುತ್ತಿದ್ದ ನಾನು ಆಗತಾನೇ ತಲೆಸ್ನಾನ ಮಾಡಿ ಒಣಗುತ್ತಿದ್ದ ಕೂದಲನ್ನು ಮುಖದ ತುಂಬೆಲ್ಲಾ ಹರಡಿಕೊಂಡು ವಿಚಿತ್ರ ಶಬ್ದಮಾಡುತ್ತಾ ಕುಣಿಯತೊಡಗಿದೆ. ಹೊರಗಿದ್ದ ಅಕ್ಕ ಒಳಗೋಡಿ ಬಂದವಳೇ ಏನಾಯ್ತೆಂದು ವಿಚಾರಿಸಿದಳು. ನಾನು ಧ್ವನಿ ಬದಲಾಯಿಸಿ, "ನಾನು ಚೌಡಿ. ನನಗೆ ನಿನ್ನ ತಂಗಿ ಬೇಕೇಬೇಕು. ಕಳಿಸಿಬಿಡು." ಎಂದು ಕಿರುಚತೊಡಗಿದೆ. ಆದರೆ ಅಕ್ಕ ಚೌಡಿಗೆಲ್ಲ ಹೆದರುವ ಗಿರಾಕಿಯಾಗಿರಲಿಲ್ಲ. ನನ್ನ ಕೂದಲಿಗೆ ಕೈಹಾಕಿ ಗಟ್ಟಿಯಾಗಿ ಎಳೆಯುತ್ತಾ, "ಎಂಥ ಚೌಡಿ ನೀನು? ನನ್ನ ತಂಗಿ, ಮನೆಗೆ ಹೋಗಿ ಓದದೇ ಹಾಳಾಗಲಿ ಅಂತ ನಿನ್ನ ಬಯಕೆಯೇನು? ನಿನಗೆಲ್ಲ ಯಾರು ಹೆದರ್ತಾರೆ? ಬಾ ನೀನು. ನಿನಗೊಂದು ಗತಿಕಾಣಿಸ್ತೇನೆ ನೋಡು" ಎಂದು ಬೆನ್ನಿನ ಮೇಲೆ ಬಾರಿಸತೊಡಗಿದಳು. ಅವಳು ಕೂದಲು ಎಳೆದ ರಭಸಕ್ಕೆ ನಾನು ನನ್ನ ಚೌಡಿಯ ಆವಾಹನೆಯನ್ನು ತಕ್ಷಣ ಇಳಿಸಿ, "ಅಯ್ಯಯ್ಯೋ ಎಳೀಬೇಡ ಮಾರಾಯ್ತಿ" ಎಂದು ಕೊಸರಿಕೊಂಡಿದ್ದೆ. ಅಕ್ಕ ಒಂದಿನಿತೂ ವಿಚಲಿತಳಾಗದೆ, "ಇನ್ನೆಲ್ಲಿಯಾದರೂ ಚೌಡಿ ಗಿಡ್ಡಿಯನ್ನು ಮೈಮೇಲೆ ಕರೆದರೆ ಪರೀಕ್ಷೆ ಮುಗಿದಮೇಲೂ ಮನೆಗೆ ಕಳಿಸಲ್ಲ ತಿಳ್ಕೊ. ಇಲ್ಲೇ ಮುಂದಿನ ಕ್ಲಾಸಿನ ಟ್ಯೂಷನ್‌ಗೆ ಸೇರಿಸ್ತೇನೆ" ಎಂದು ಹೆದರಿಸಿದ್ದಳು. ನನ್ನ ಕತೆ ಕೇಳಿದ ಲೋರೆ ಪಕಪಕನೆ ನಕ್ಕಿದ್ದ.

ಅಲ್ಲೆಲ್ಲೋ ಮುಂಬೈನ ಅಂಚಿನಲ್ಲಿರುವ ಊರಿನ ಆಲಯವೊಂದರಲ್ಲಿ ಸಾಮೂಹಿಕವಾಗಿ ಹೆಣ್ಣುಮಕ್ಕಳ ಮೈಮೇಲೆಲ್ಲ ದೈವ ಆವಾಹನೆಯಾಗುವುದೆಂದು ಲೋರೆಗೆ ಯಾರೋ ಮಾಹಿತಿ ನೀಡಿದ್ದರು. ನನ್ನ ಚೌಡಿಯ ಕತೆಯಿಂದ ಪ್ರಭಾವಿತಗೊಂಡ ಲೋರೆ ಆ ಘಟನೆಯನ್ನು ಕಣ್ಣಾರೆ ಕಂಡು ಚಿತ್ರೀಕರಿಸಿಕೊಳ್ಳಲು ಉತ್ಸುಕನಾಗಿದ್ದ.

ನಾವು ಅಲ್ಲಿಗೆ ತಲುಪುವಾಗ ತಣ್ಣನೆಯ ಬೆಳದಿಂಗಳು ಗುಡಿಯ ಸುತ್ತಲೂ ಹರಡಿತ್ತು. ವಿಶೇಷ ಪೂಜೆಯ ದಿನವಾದ್ದರಿಂದ ಇಡಿಯ ಗುಡಿ ಕೆಂಪು ಹೂಗಳಿಂದ ಅಲಂಕರಿಸಲ್ಪಟ್ಟಿತ್ತು. ಪೂಜೆ ಪ್ರಾರಂಭವಾದೊಡನೆ ಗಂಟೆಯ ನಿನಾದ ಒಂದೇ ಗತಿಯಲ್ಲಿ ಕೇಳಿಬರತೊಡಗಿತು. ಅಂದು ದರ್ಶನಕ್ಕಾಗಿ ಬಂದ ಹೆಂಗಳೆಯರೆಲ್ಲರೂ ಮಿಂದು ಒದ್ದೆ ಬಟ್ಟೆಯಲ್ಲಿ ಪ್ರಾಕಾರದುದ್ದಕ್ಕೂ ನಿಂತು ತದೇಕಚಿತ್ತರಾಗಿ ದೇವಿಯನ್ನೇ ನೋಡುತ್ತಿದ್ದರು. ತಣ್ಣನೆಯ ನೀರಿನಲ್ಲಿ ಮುಳುಗೆದ್ದು ಒದ್ದೆಯ ಉಡುಪಿನಲ್ಲಿದ್ದರಿಂದ ಸುತ್ತ ರಾಚುವ ಚಳಿಗೆ ಅವರು ಸಣ್ಣಗೆ ನಡುಗುತ್ತಿದ್ದರು. ಅಷ್ಟರಲ್ಲಿ ಜನರೆಲ್ಲ ದೇವಿಯ ಪ್ರತಿರೂಪವೆಂದು ನಂಬಿದ ಗುಡಿಯ ಪೂಜಾರ್ತಿಯ ಆಗಮನವಾಯಿತು. ಅವಳು ಸುತ್ತೆಲ್ಲೂ ನೋಡದೇ ತದೇಕಚಿತ್ತಳಾಗಿ ದೇವಿಯನ್ನೇ ನೋಡುತ್ತ ಪ್ರಾಂಗಣದಲ್ಲಿ ನಡೆದುಕೊಂಡು ಹೋಗಿ ಅರ್ಚಕರೆದುರು ನಿಂತಳು. ಅವರು ಸಿಂಗಾರದ ಕೊನೆಯೊಂದನ್ನು ದೇವಿಯ ಸುತ್ತ ಸುಳಿದು ತಂದು ಅವಳ ಕೈಗೆ ನೀಡಿದರು. ಅವಳು ಅದರ ಚೂರೊಂದನ್ನು ಎಲ್ಲ ಹೆಂಗಸರಿಗೂ ನೀಡಿ